ಕಣ್ಣು ಕೊಂಚ ಓರೆಯಾಗಿದೆ ಎಂಬುದೊಂದು ಬಿಟ್ಟರೆ ಆಕೆ ಅಪ್ರತಿಮ ಸುಂದರಿ. ಅವಳ ಕಣ್ಣು ವಾರೆಯಾಗಿರುವುದು ಗೊತ್ತಾಗಬಾರದು ಎಂದು ಶೀಷೆ ಶೇಷಪ್ಪನವರು ಕಪ್ಪು ಕನ್ನಡಕಗಳನ್ನು ಖರೀದಿಸುತ್ತಲೇ ಇರುತ್ತಾರೆ. ವಿಲಾಸಿನಿಯಾದರೋ ತನ್ನ ಕಪ್ಪು ಕನ್ನಡಕವನ್ನು ಕಳೆದುಕೊಳ್ಳುತ್ತಲೇ ಇರುತ್ತಾಳೆ. ಈ ಶೀಷೆ ಶೇಷಪ್ಪನವರ ಎದುರಿಗೇ ನಾವು ಸಾಹಿತ್ಯಿಕ ಭಾಷೆಯಲ್ಲಿ ಲಲ್ಲೆಗರೆಯುತ್ತಿದ್ದುದು. ಶೀಷೆ ಶೇಷಪ್ಪನವರು ಇದೆಲ್ಲವನ್ನೂ ಸಾಹಿತ್ಯಿಕ ಚರ್ಚೆ ಎಂದು ತಿಳಿದುಕೊಂಡು ಹೆಮ್ಮೆ ಪಡುತ್ತಿದ್ದರು. ಅವರಿಗೆ ಸಾಹಿತ್ಯ, ಸಂಕೇತ, ಪ್ರತಿಮೆ ಇತ್ಯಾದಿಗಳಿಗಿಂತ ಕುಡಿದು ಖಾಲಿಯಾದ ಮದ್ಯದ ಶೀಷೆಗಳನ್ನು ಸಂಗ್ರಹಿಸುವುದು ಮತ್ತು ಅವುಗಳ ಮೇಲೆ ಬಣ್ಣ ಬಣ್ಣದ ಹೂವುಗಳ ಚಿತ್ರ ಬಿಡಿಸಿ ಸಾಲಾಗಿ ಜೋಡಿಸಿಡುವುದರಲ್ಲೇ ಹೆಚ್ಚಿನ ಆಸಕ್ತಿ. ಅವರು ಕುಡಿಯುವುದಿಲ್ಲ. ಆದರೆ, ವಿಸ್ಕಿಯ ಗ್ಲಾಸಿಗೆ ಸೋಡಾ ಬೆರೆಸುವುದು, ಸೋಡಾಕ್ಕೆ ನಿಂಬೆ ಹೋಳು ಹಿಂಡುವುದು, ಹುರಿದ ಕೋಳಿಯ ತುಂಡು ಸರಿ ಬೆಂದಿದೆಯೇ ಎಂದು ನೋಡುವುದು ಇತ್ಯಾದಿಗಳಲ್ಲಿ ಹೆಚ್ಚು ಆಸಕ್ತಿ. ಅವರು ತಮ್ಮ ಮಡದಿ ವಿಲಾಸಿನಿಯನ್ನೂ ಕುಡಿಯಲು ಬಿಡುತ್ತಿರಲಿಲ್ಲ. ಹಾಗಾಗಿ ಲಿಂಬೆ ಶರಬತ್ತಿನ ಗ್ಲಾಸಿಗೆ ಒಂದು ಉದ್ದದ ಸ್ಟ್ರಾ ಮುಳುಗಿಸಿ ಅದನ್ನು ತನ್ನ ಚೂಪಾದ ತುಟಿಗೆ ತಾಗಿಸಿ ಚಾರುದತ್ತರನ್ನೂ, ನನ್ನನ್ನೂ ತನ್ನ ಕಣ್ಣಕೊನೆಯಿಂದಲೇ ಮರಳುಗೊಳಿಸುತ್ತಾ ಕೂರುವುದು ವಿಲಾಸಿನಿಯ ಹುಚ್ಚು ಅಭ್ಯಾಸ. ಇದನ್ನೇ ಅವಳ ಬದುಕಿನ ಉತ್ಕಟತೆ ಎಂದು ಚಾರುದತ್ತರು ಬಣ್ಣಿಸುತ್ತಿದ್ದರು. ಅವರು ಓದಿದ ಆಂಗ್ಲ ಸಾಹಿತ್ಯದಲ್ಲಿ ಹೀಗೆ ಉತ್ಕಟವಾಗಿದ್ದ ಹಲವು ಕಥಾಪಾತ್ರಗಳಿದ್ದವಂತೆ. ಬೇರೆ ಏನೂ ಜಾಸ್ತಿ ಉತ್ಕಟತೆಗಳು ಕಾಣಿಸದ ಈ ವಯಸಲ್ಲಿ ವಿಲಾಸಿನಿಯೇ ಅವರಿಗೆ ಉತ್ಕಟವಾಗಿ ಕಾಣಿಸುತ್ತಿದ್ದಳು.

ವಿಲಾಸಿನಿ ಆಂಗ್ಲ ಸಾಹಿತ್ಯವನ್ನು ಏನೂ ಓದಿಕೊಂಡಿರಲಿಲ್ಲ. ಚಾರುದತ್ತರು ಹೇಳುವುದೇ ಅವಳಿಗೆ ಆಂಗ್ಲಸಾಹಿತ್ಯ. ಅವಳು ಎಷ್ಟು ಚುರುಕು ಅಂದರೆ ಅವರು ಹೇಳಿದ್ದನ್ನು ಒಂದು ಕ್ಷಣದಲ್ಲಿ ಹಿಡಿದುಬಿಡುತ್ತಿದ್ದಳು ಮತ್ತು ತಾನೇ ಅದಾಗಿಬಿಡುತ್ತಿದ್ದಳು.

'ಈಗ ನೋಡು ಎಷ್ಟು ಚಂದ. ನೀನು ಆ ಉದ್ದದ ಹೀರುಕೊಳವೆಯನ್ನು ತುಟಿಯಲಿಟ್ಟುಕೊಂಡು ನೋಡುವುದನ್ನು ನೋಡಿದರೆ ಗೋಪಿಕೆ ಮತ್ತು ಗೋಪಾಲನ ಕೊಳಲಿನ ಪ್ರತಿಮೆ ನೆನಪಾಗುತ್ತದೆ. ಬಹಳ ಚಂದ ಬಹಳ ಚಂದ' ಎಂದು ಚಾರುದತ್ತರು ಹೇಳಿದ್ದರು.

'ಚಾರುದತ್ತರೇ ನೀವು ಹೇಳಿದ ಪ್ರತಿಮೆಯನ್ನು ನವ್ಯ ಕವಿಗಳೊಬ್ಬರು ಈಗಾಗಲೇ, 'ಗೀಸಿ ಅಗಲಿಸಿದ ತುಟಿ' ಎಂದು ಬರೆದಿರುವರಲ್ಲವೇ' ಎಂದು ನಾನೂ ಒಂದು ಸಾಲು ಬಿಟ್ಟೆ.

ಅದು ವಿಲಾಸಿನಿಯ ಆತ್ಮವನ್ನು ತಾಕಬೇಕು ಅನ್ನುವುದು ನನ್ನ ಗುರಿ. ಅದು ಅಲ್ಲಿಗೆ ತಾಗಿದ ಹಾಗೆ ಅನಿಸಿತು. ಆಕೆ ತುಟಿಯಿಂದ ಆ ಕೊಳವೆಯನ್ನು ಇನ್ನಷ್ಟು ಬಿಗಿಯಾಗಿ ಕಚ್ಚಿಕೊಂಡು ಕಣ್ಮುಚ್ಚಿಕೊಂಡಳು.

ಅಷ್ಟರಲ್ಲಿ ಶೀಷೆ ಶೇಷಪ್ಪನವರು ಯಾರದೋ ಫೋನು ಬಂತು ಎಂದು ಎದ್ದು ಹೋದರು.

'ಇಕಾ ಬೇಗ ಒಂದು ಗುಟುಕು ತಕೋ' ಎಂದು ಚಾರುದತ್ತರು ಅವಳ ಮುಂದೆ ತಮ್ಮ ವಿಸ್ಕಿಯ ಗ್ಲಾಸು ಇಟ್ಟರು. ಆಕೆ ಬೆಕ್ಕಿನಂತೆ ಒಂದು ದೊಡ್ಡ ಗುಟುಕು ಹೀರಿ ಕಣ್ಮುಚ್ಚಿಕೊಂಡಳು. ವಿಸ್ಕಿ ಹೀರಿದ ಆಕೆಯ ಬೆಚ್ಚಗಿನ ಪರಿಮಳ, ಆಕೆಯ ಸಣ್ಣದೊಂದು ತೇಗು, ತುಟಿಯಲ್ಲೇ ಕಂಡ ಒಂದು ಚೂಪು ನಗು. ನನಗೆ ತಲೆ ತಿರುಗಲು ಇನ್ನೇನು ಬೇಕು?

ನಾವು ಕೂತಿದ್ದುದು ಮಡಿಕೇರಿಯ ಮೇಲಿರುವ ಬೆಟ್ಟದ ತುದಿಯಲ್ಲಿರುವ ಹಿಮದರ್ಶನ ಬಾರಿನ ಒಂದು ಮೂಲೆಯಲ್ಲಿ. ನಿಮ್ಮಲ್ಲಿ ಯಾರಾದರೂ ಮಡಿಕೇರಿಗೆ ಭೇಟಿ ಕೊಟ್ಟಿದ್ದರೆ ಈ ಹಿಮದರ್ಶನ ಬಾರನ್ನೂ ಅದು ಇರುವ ಬೆಟ್ಟದ ತುದಿಯ ಕುಳಿರು ಆಹ್ಲಾದವನ್ನೂ ಮತ್ತು ಆ ಬೆಟ್ಟದ ತುದಿಯಿಂದ ಕೆಳಗೆ ಕಾಣಿಸುವ ಕೊಡಗಿನ ಪ್ರಕೃತಿ ರಮಣೀಯತೆಯ ವಿಹಂಗಮ ನೋಟವನ್ನೂ ನೋಡಿರುತ್ತೀರಿ.